# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103
ದೂರವಾಣಿ: 0816-2254546, 0816-2255596, 0816-2255597 ಫ್ಯಾಕ್ಸ್: 0816-2270719

ಸಂಖ್ಯೆ:ತು.ವಿ.:ಸಾ.ವಿ:2025-26/ |208 ದಿನಾಂಕ:30.07.2025

## ದರಪಟ್ಟಿ ಆಹ್ವಾನ

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಗುರುತಿನ ಚೀಟಿಗಳನ್ನು ಮುದ್ರಣಯಂತ್ರ ಸರಬರಾಜು ಮಾಡಲು ದರಪಟ್ಟಿಗಳನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 11.07.2025 (ಕಂಡಿಕೆ-162)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಗುರುತಿನ ಚೀಟಿಗಳನ್ನು ಮುದ್ರಿಸಲು ಮುದ್ರಣ ಯಂತ್ರ ಸರಬರಾಜು ಮಾಡಲು ಕೆಳಕಂಡ ಷರತ್ತುಗಳಿಗೊಳಪಟ್ಟು ಆಸಕ್ತ ನೋಂದಾಯಿತ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು, **ಗುರುತಿನ ಚೀಟಿಗಳ ಮುದ್ರಣ ಯಂತ್ರದ ಮಾದರಿ, ವೈಶಿಷ್ಟತೆ ವಿವರಗಳು ಈ ಕೆಳಕಡಂತಿವೆ.**

| Sl. No | Specifications | Required Quantity | Rate to be quoted (Incl. of all Services & taxes) |
|---|---|---|---|
| 01 | **Print Technology:**HDP (High Definition Printing) Dye – Sublimation/Resin Thermal Transfer<br>**Print Resolution:**600 dpi (23.6 dots/mm)<br>**Ribbon:**YMCK 750 Images<br>**Film:**HDP Film (1500 Images)<br>**Accepted Card Types:**ABS, PVC, PET, PETG Proximity, smart and mag stripe cards<br>**Print Speed:**Upto 16 Seconds per card YMCK<br>**Accepted card Thickness:**0.762 m m to 1.27 mm<br>**Input Card Cartidge Capacity:**100 cards (.030" / .762 mm)<br>**Output Hopper Card Capacity:**200 cards (.030" / .762 mm)<br>**Connectivity:**USB 2.0, Ethernet (100 Mbps)<br>**Software Drivers:**Windows 10/8.1/8<br>**Memory;**1GB RAM<br>**Green circle Certified:**Yes<br>**Additions : ID Card Software**<br>YMCK Ribbon (750 prints)<br>HDP Film (1500 prints)<br>Premium Plain PVC Cards<br>20mm Lanyards with attached V2/H2 Holder<br>ID Card Software license | 01 | |

**ಷರತ್ತುಗಳು:**

1. ವಿಶ್ವವಿದ್ಯಾನಿಲಯವು ಗುರುತಿನ ಚೀಟಿಯ ಮುದ್ರಣ ಯಂತ್ರಗಳನ್ನು ಕಾರ್ಯಾದೇಶದಲ್ಲಿ ನಿಗದಿಪಡಿಸಿದ ಅವಧಿಯೊಳಗೆ ಅಥವಾ ವಿಸ್ತರಿಸಿದ ಅವಧಿಯೊಳಗೆ ಮುದ್ರಣ ಯಂತ್ರವನ್ನು ಸರಬರಾಜು ಮಾಡಬೇಕು.
2. ಮುಚ್ಚಿದ ಲಕೋಟೆಯ ಮೇಲೆ **"ವಿದ್ಯಾರ್ಥಿಗಳಿಗೆ ಗುರುತಿನ ಚೀಟಿ ಮುದ್ರಣಯಂತ್ರ ಸರಬರಾಜು ಮಾಡಲು ದರಪಟ್ಟಿ"** ಎಂದು ನಮೂದಿಸುವುದು.

(ಪು.ತಿ.ನೋ)

3. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ಕಡ್ಡಾಯವಾಗಿ ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
4. ದರಪಟ್ಟಿಯ ಅವಧಿಯು ದರಪಟ್ಟಿಗಳನ್ನು ತೆರೆದ ದಿನಾಂಕದಿಂದ 60 ದಿನಗಳ ಅವಧಿಯವರೆಗೆ ಚಾಲ್ತಿಯಲ್ಲಿರಬೇಕು.
5. ಸರಬರಾಜು ಮಾಡಲು ಯಾವುದೇ ಮುಂಗಡ ಹಣವನ್ನು ನೀಡಲಾಗುವುದಿಲ್ಲ.
6. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮೊತ್ತ ಮತ್ತು ಸಾಗಾಣಿಕೆ ಮೊತ್ತವನ್ನು ಒಳಗೊಂಡಿರಬೇಕು.
7. ದರಪಟ್ಟಿಯನ್ನು ಅಂಗೀಕರಿಸುವಾಗ ಸಂಸ್ಥೆಗಳು ಸಲ್ಲಿಸಿದ ದರಪಟ್ಟಿಗಳಲ್ಲಿನ ಅತೀ ಕಡಿಮೆ ದರವನ್ನು ಪರಿಗಣಿಸಲಾಗುವುದು.
8. ದರಪಟ್ಟಿಗಳ ಆಯ್ಕೆಯ ವಿಷಯದಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ ನಿಯಮಾವಳಿಗೆ ಬದ್ಧವಾಗಿ ಆಯ್ಕೆಮಾಡಲಾಗುವುದು ಮತ್ತು ಇದರಲ್ಲಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
9. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
10. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
11. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 11.08.2025 ಅಪರಾಹ್ನ 12.30** ಗಂಟೆ.
12. ದರಪಟ್ಟಿಯನ್ನು **ದಿನಾಂಕ: 11.08.2025** ರಂದು **ಅಪರಾಹ್ನ 4.00** ಕ್ಕೆ ತೆರೆಯಲಾಗುವುದು.
13. **ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು-572 103,** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗುವುದಿಲ್ಲ.
14. ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
15. ಹೆಚ್ಚಿನ ಮಾಹಿತಿ ಮತ್ತು ವಿವರಗಳ ಅಗತ್ಯವಿದ್ದಲ್ಲಿ **ಉಪಕುಲಸಚಿವರು, ಸಾಮಾನ್ಯ & ಖರೀದಿ ಕೋಶ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸುವುದು.

**ಆದೇಶದ ಮೇರೆಗೆ,**

**ಉಪಕುಲಸಚಿವರು**
**ಉಪಕುಲಸಚಿವರು**
**ಸಾಮಾನ್ಯ ವಿಭಾಗ**
**ತುಮಕೂರು ವಿಶ್ವವಿದ್ಯಾಲಯ**
**ತುಮಕೂರು**

ಪ್ರತಿಗಳು:
1. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು).
3. ಕಚೇರಿ ಪ್ರತಿ.